**<u>ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ</u>**
**<u>ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ</u>**

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 22**
**ಪಿಡಬ್ಲೂಃ 18**

ಸಾಕ್ಷಿದಾರರ ಹೆಸರು **:** ಗಿರಿಮಲ್ಲಪ್ಪ ಖಂಡೇಕರ

ತಂದೆಯ ಹೆಸರು **:** ವಿಠ್ಠಲ

ವಯಸ್ಸು **: 40** ವರ್ಷ

ಉದ್ಯೋಗ **:** ಮುಖ್ಯ ಪೇದೆ**,** ಬಬಲೇಶ್ವರ ಪೋಲೀಸ ಠಾಣೆ

ವಾಸಸ್ಥಳ **:** ಬಬಲೇಶ್ವರ

\- - - - -

**<u>ಇಂದು ದಿನಾಂಕ 02.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>**

1) ಕೊಲ್ಹಾರ ಪೋಲೀಸ ಠಾಣೆಯಲ್ಲಿ ನಾನು ಸನ್ 2021 ರಿಂದ ಆಗಸ್ಟ-2024 ರವರೆಗೆ ಮುಖ್ಯ ಪೇದೆ ಎಂದು ಸೇವೆ ಸಲ್ಲಿಸಿದ್ದೇನೆ.

2) ದಿನಾಂಕ 17.01.2024 ರಂದು ನಾನು ಮತ್ತು ಪಿ.ಎಸ್.ಐ. ಮತ್ತು ಚಾ.ಸಾ.20 ರವರು ಪೆಟ್ರೋಲಿಂಗ ಕರ್ತವ್ಯದಲ್ಲಿದ್ದಾಗ ನಸುಕಿನ 04.30 ಘಂಟೆಗೆ ಮಟ್ಯಾಳ ಗ್ರಾಮದಲ್ಲಿ ತೆಲಗಿ ಕಡೆಯಿಂದ ಮೋಟರ ಸೈಕಲ್ ಮೇಲೆ ಇಬ್ಬರು ಬರುವುದನ್ನು ನೋಡಿ, ಅವರ ಮೇಲೆ ಸಂಶಯ ಬಂದು ಅವರನ್ನು ವಿಚಾರಿಸಿದಾಗ ಅವರು ತಮ್ಮ ಹೆಸರು ಪ್ರಕಾಶ ಹರಣಶಿಕಾರಿ, ಸಾ: ಕೊಲ್ಹಾರ ಮತ್ತು ಮೌನೇಶ ಬಡಿಗೇರ, ಸಾ: ಹಳ್ಳದಗೆಣ್ಣೂರ ಎಂದು ತಿಳಿಸಿದರು. ಸದರಿಯವರನ್ನು ವಿಚಾರಿಸಲಾಗಿ ಅವರ ಬಳಿ ಒಂದು ಗರಗಸ ಮತ್ತು ಕೊಡಲಿಯನ್ನು ಅವರ ಬಳಿ ಇದ್ದ ಚೀಲದಲ್ಲಿ ಇಟ್ಟಿದ್ದರು. ಅವರನ್ನು

ನಾವು ವಿಚಾರಿಸಲಾಗಿ ಸದರಿಯವರು ತೆಲಗಿಯಲ್ಲಿ ಶ್ರೀಗಂಧದ ಮರಗಳನ್ನು ಕಡಿಯಲು ಹೋಗಿದ್ದಾಗಿ ತಿಳಿಸಿದರು. ಅಲ್ಲಿ ಜನ ಜಾಸ್ತಿ ಇದ್ದ ಕಾರಣ ತಾವು ಅಲ್ಲಿಂದ ಕೊಲ್ಹಾರ ಕಡೆಗೆ ಹೊರಟಿದ್ದೇವೆ ಎಂದು ತಿಳಿಸಿದರು.

3) ಆ ಸಮಯದಲ್ಲಿ ನಮ್ಮ ಠಾಣಾ ಪಿ.ಎಸ್.ಐ. ಅವರು ಅವರನ್ನು ಮತ್ತು ಮೋಟರ ಸೈಕಲ್ ಮತ್ತು ವಸ್ತುಗಳನ್ನು ಠಾಣೆಗೆ ತಂದಿರುತ್ತಾರೆ. ಸದರಿಯವರನ್ನು ವಿಚಾರಿಸಲಾಗಿ ಪ್ರಕಾಶ ಹರಣಶಿಕಾರಿ, ಮೌನೇಶ ಬಡಿಗೇರ ಹಾಗೂ ಇನ್ನೂ ಇಬ್ಬರು ಆಸಂಗಿ ರೋಡಿನ ಜಮೀನಿನಲ್ಲಿ ಬರುವ ಶ್ರೀಗಂಧದ ಮರಗಳನ್ನು ಕಡಿದು ಸುಮಾರು 62 ಕೆ.ಜಿ.ಯಷ್ಟು ಶ್ರೀಗಂಧದ ತುಂಡುಗಳನ್ನು ಇಂಡಿ ತಾಲೂಕಿನ ಹಿರೇರೂಗಿ ಗ್ರಾಮದ ಹಣಮಂತ ಮಾದರ ಎನ್ನುವವನಿಗೆ ಮಾರಾಟ ಮಾಡುತ್ತಿದ್ದು, ಸದರಿಯವರ ಹತ್ತಿರವಿದ್ದ ಎರಡು ಗರಗಸ, ಒಂದು ಕೊಡಲಿ, ಬಜಾಜ ಕಂಪನಿಯ ಒಂದು ದ್ವಿಚಕ್ರ ವಾಹನವನ್ನು ಜಪ್ತಿ ಮಾಡಿದರು.

4) ಆ ದಿನ ನಮ್ಮ ಸಮಕ್ಷಮ ಪಿ.ಎಸ್.ಐ. ಅವರು ಈ ದಿನ ನ್ಯಾಯಾಲಯದಲ್ಲಿರುವ 1 ಮತ್ತು 2ನೇ ಆರೋಪಿತರನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಗರಗಸ, ಕೊಡಲಿ, ಮೋಟರ ಸೈಕಲ್ ಮತ್ತು ಗೊಬ್ಬರ ಚೀಲಗಳನ್ನು ಸಾಕ್ಷಿಯು ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 4 ಎಂದು ಗುರುತಿಸಲಾಗಿದೆ. ಈ ಪ್ರಕರಣದ ಕುರಿತು ತನಿಖಾಧಿಕಾರಿಗಳ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ.

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 22**
**ಪಿಡಬ್ಲೂಃ 18**

**<u>ಪಾಟೀ ಸವಾಲುಃ ಶ್ರೀ ಪಿ.ಎಂ.ಬಿ., ವಕೀಲರಿಂದ 6 ನೇ ಆರೋಪಿ ಪರವಾಗಿಃ</u>**

5) ನನ್ನ ಕರ್ತವ್ಯದ ದಿನಚರಿಯನ್ನು ಹಿಂದಿನ ದಿನವೇ ನಿಗದಿಪಡಿಸಿರುತ್ತಾರೆ ಎಂದರೆ ಸರಿ. ದಿನಾಂಕ 17.01.2024 ರಂದು ನನ್ನನ್ನು ಠಾಣೆಯಲ್ಲಿ ರಾತ್ರಿ ಕರ್ತವ್ಯಕ್ಕೆ ನೇಮಿಸಿದ್ದರು. ಪೆಟ್ರೋಲಿಂಗ ಕರ್ತವ್ಯಕ್ಕೆ ಮತ್ತು ಹೆಚ್ಚುವರಿ ಸಿಬ್ಬಂದಿ ಎಂದು ಬೇರೆ-ಬೇರೆಯವರನ್ನು ನೇಮಿಸಿರುತ್ತಾರೆ ಎಂದರೆ ಸರಿ. ಸದರಿ ದಿನಾಂಕ 17.01.2024 ರಂದು ನನ್ನನ್ನು ಪೆಟ್ರೋಲಿಂಗ ಕರ್ತವ್ಯಕ್ಕೆ ನೇಮಿಸಿರಲಿಲ್ಲ ಎಂದರೆ ಸರಿ. ಹೆಚ್ಚುವರಿ ಸಿಬ್ಬಂದಿಯನ್ನು ತುರ್ತು ಕರ್ತವ್ಯಕ್ಕೆ ನೇಮಿಸುತ್ತಾರೆ ಎಂದರೆ ಸಾಕ್ಷಿಯು ಹೆಚ್ಚುವರಿ ಸಿಬ್ಬಂದಿಯನ್ನು ಯಾವುದೇ ಕೆಲಸಕ್ಕೂ ಕರೆದುಕೊಂಡು ಹೋಗಬಹುದು ಎಂದು ನುಡಿಯುತ್ತಾರೆ.

6) ದಿನಾಂಕ 17.01.2024 ರಂದು ಮಟ್ಯಾಳ ಗ್ರಾಮದ ಪೆಟ್ರೋಲಿಂಗ ಕರ್ತವ್ಯಕ್ಕೆ ಯಾರನ್ನು ನೇಮಿಸಲಾಗಿತ್ತು ಎಂದು ನನಗೆ ನೆನಪಿಲ್ಲ. ಸದರಿ ಬೀಟನ ಸಿಬ್ಬಂದಿಯನ್ನು ಕರೆದು ಯಾವುದೇ ವಿಚಾರಣೆ ಮಾಡಲಾಗಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ತನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಗರಗಸ ಮತ್ತು ಕೊಡಲಿಯ ಉದ್ದಳತೆ ನನಗೆ ನೆನಪಿಲ್ಲ. ಒಂದೇ ಮೋಟರ ಸೈಕಲ್ ಮೇಲೆ ನಾಲ್ಕು ಜನರು ಹೋಗಬಹುದೇ ಎಂದರೆ ಸಾಕ್ಷಿಯು ಹೋಗಬಹುದು ಎಂದು ನುಡಿದಿರುತ್ತಾರೆ.

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 22**
**ಪಿಡಬ್ಲೂಃ 18**

7) ಸದರಿ ದಿನದಂದು ನಾನು ಯಾವುದೇ ಗಸ್ತು ಕರ್ತವ್ಯಕ್ಕೆ ಹೋಗದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ಆರೋಪಿಗೆ ಯಾವುದೇ ಶ್ರೀಗಂಧದ ಮರಗಳನ್ನು ಉಳಿದ ಆರೋಪಿತರು ಮಾರಾಟ ಮಾಡದೇ ಇದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಉಳಿದ ಆರೋಪಿತರ ಪರವಾಗಿಃ**

ಉಳಿದ ಆರೋಪಿತರ ಪರ ವಕೀಲರು ಶ್ರೀ ಪಿ.ಎಂ.ಬಿ., ವಕೀಲರು ಮಾಡಿದ ಪಾಟಿ ಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

4 ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.

**<u>ನಾಲ್ಕನೆಯ  ಹೆಚ್ಚುವರಿ ಜಿಲ್ಲಾ ಮತ್ತು ಸತ್ರ</u>**
**<u>ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ</u>**

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 25**
**ಪಿಡಬ್ಲೂಃ 19**

ಸಾಕ್ಷಿದಾರರ ಹೆಸರು : ಶರಣು ಗೌಡರ

ತಂದೆಯ ಹೆಸರು : ಬಸವರಾಜ

ವಯಸ್ಸು : 44 ವರ್ಷ

ಉದ್ಯೋಗ : ಸಿ.ಪಿ.ಐ., ನಿಡಗುಂದಿ ವೃತ್ತ

ವಾಸಸ್ಥಳ : ನಿಡಗುಂದಿ.

- - - - -

**<u>ಇಂದು ದಿನಾಂಕ 02.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>**

1) ದಿನಾಂಕ 05.02.2024 ರಿಂದ 25.06.2024 ರವರೆಗೆ ನಾನು ನಿಡಗುಂದಿ ವೃತ್ತದ ಸಿ.ಪಿ.ಐ. ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

2) ದಿನಾಂಕ 05.02.2024 ರಂದು ಪ್ರಸ್ತುತ ಪ್ರಕರಣದ ಕಡತವನ್ನು ಚಾ.ಸಾ.26 ರವರಿಂದ ಸ್ವೀಕರಿಸಿ ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ. ದಿನಾಂಕ 07.02.2024 ರಂದು ಘಟನೆಗೆ ಸಂಬಂಧಿಸಿದಂತೆ ದಿನಾಂಕ 09.07.2023 ರಂದು ಅರಣ್ಯ ಇಲಾಖೆಯಲ್ಲಿ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣದ ದೃಢೀಕೃತ ನಕಲನ್ನು ಪೂರೈಸಲು ಅರಣ್ಯಾಧಿಕಾರಿಗಳು, ಮುದ್ದೇಬಿಹಾಳ ಇವರಿಗೆ ಪೂರೈಸಲು ಕೋರಿ ಪತ್ರ ಬರೆದಿರುತ್ತೇನೆ. ಅದೇ ದಿನ ಪ್ರಕರಣದಲ್ಲಿ ವಶಪಡಿಸಿಕೊಂಡ

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 25**
**ಪಿಡಬ್ಲೂಃ 19**

ದ್ವಿಚಕ್ರ ವಾಹನ ನಂ.ಕೆ.ಎ.-28/ಇ.ಡಬ್ಲೂ-3760 ನೇದರ 'ಬಿ' ಎಕ್ಸಟ್ರ್ಯಾಕ್ಟನ್ನು ಕೋರಿ ಪತ್ರ ಬರೆದಿರುತ್ತೇನೆ. ಅದೇ ದಿನ ಫಿರ್ಯಾದುದಾರರ ಹೊಲದ ಆರ್.ಟಿ.ಸಿ.ಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ.

3) ಅದೇ ದಿನ ಆರೋಪಿ ಹಣಮಂತ ಮಾದರ ಅವರಿಗೆ ಸಂಬಂಧಿಸಿದ ಸ್ವತ್ತಿನ ದೃಢೀಕೃತ ನಕಲನ್ನು ರೂಗಿ ಪಿ.ಡಿ.ಓ., ಗ್ರಾಮ ಪಂಚಾಯಿತಿ ಅವರಿಂದ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ದಿನಾಂಕ 09.02.2024 ರಂದು ಆರೋಪಿತರ ಮೊಬೈಲ ನಂಬರಗಳ ಸಿ.ಎ.ಎಂ. ಪೂರೈಸಲು ಮಾನ್ಯ ಎಸ್.ಪಿ., ವಿಜಯಪುರ ಅವರಿಗೆ ಪತ್ರವನ್ನು ಬರೆದಿರುತ್ತೇನೆ. ದಿನಾಂಕ 17.02.2024 ರಂದು ಸದರಿ ಪ್ರಕರಣದಲ್ಲಿ ಪರಾರಿ ಇರುವ ಆರೋಪಿ ನಂ.3 ಉಮೇಶ ಮಾದರ ಈತನನ್ನು ಹುಡುಕಾಡಲು ಪಿ.ಎಸ್.ಐ., ಕೊಲ್ಹಾರ ಇವರಿಗೆ ಆದೇಶ ಮಾಡಿರುತ್ತೇನೆ.

4) ದಿನಾಂಕ 18.02.2024 ರಂದು ಪ್ರಕರಣದಲ್ಲಿ ಜಪ್ತಾದ ಒಟ್ಟು ರೂ.82,500/- ಗಳನ್ನು ಪಿ.ಎಫ್. ಮುಖಾಂತರ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಚಾ.ಸಾ.24 ಪಿ.ಎಸ್.ಐ. ಅವರ ತಾಬಾಕ್ಕೆ ನೀಡಿರುತ್ತೇನೆ. ದಿನಾಂಕ 21.02.2024 ರಂದು ಸಾಕ್ಷಿದಾರರಾದ ಚಾ.ಸಾ.16 ಮತ್ತು 17 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 23.02.2024 ರಂದು ಚಾ.ಸಾ.21 ರವರ

ಹೇಳಿಕೆಯನ್ನು ಮತ್ತು ಅವರು ಫೋಟೋ ತೆಗೆದ ಬಗ್ಗೆ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ಸದರಿ ಪ್ರಮಾಣಪತ್ರವನ್ನು ಈಗಾಗಲೇ ನಿ.ಪಿ.22 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.22(ಬಿ) ಎಂದು ಗುರುತಿಸಲಾಯಿತು.

5) ದಿನಾಂಕ 06.04.2024 ರಂದು ಚಾ.ಸಾ.19 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 23.05.2024 ರಂದು ಪ್ರಕರಣದ 3 ನೇ ಆರೋಪಿ ಉಮೇಶ ಮಾದರ ಈತನು ಮಾನ್ಯ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ನನ್ನ ಮುಂದೆ ಹಾಜರಾದ ಮೇರೆಗೆ ಆತನ ವಿರುದ್ಧ ದಸ್ತಗಿರಿ ನಿಯಮ ಪಾಲಿಸಿ ಬಾಂಡ್ ಪಡೆದು ವಿಚಾರಣೆ ಮಾಡಿ, ಆತನ ಸ್ವಇಚ್ಛಾ ಹೇಳಿಕೆಯನ್ನು ಪಡೆದು ಆತನನ್ನು ಬಿಡುಗಡೆ ಮಾಡಿರುತ್ತೇನೆ. ಮುಂದಿನ ತನಿಖೆಯನ್ನು ಚಾ.ಸಾ.26 ರವರಿಗೆ ವಹಿಸಿರುತ್ತೇನೆ.

6) ನಾನು ಸ್ವೀಕರಿಸಿದ ಮೂರು ಉತಾರೆಗಳನ್ನು ಈಗ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.30 ರಿಂದ 32 ಎಂದು, ಸಾಕ್ಷಿಯ ಸಹಿಗಳನ್ನು ನಿ.ಪಿ.30(ಎ) ರಿಂದ ನಿ.ಪಿ.32(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ಪಿ.ಎಂ.ಬಿ., ವಕೀಲರಿಂದ 6 ನೇ ಆರೋಪಿ ಪರವಾಗಿಃ</u>**

7) ನಾನು ಕಡತವನ್ನು ತನಿಖೆಗಾಗಿ ತೆಗೆದುಕೊಳ್ಳುವ ಮುಂಚಿತವಾಗಿ ದಿನಾಂಕ 09.07.2023 ರಂದು ಘಟನೆ ಜರುಗಿತ್ತು. ಈಗ ನೋಡುತ್ತಿರುವ

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 25**
**ಪಿಡಬ್ಲೂಃ 19**

ಅರಣ್ಯ ಇಲಾಖೆಯವರ ಎಫ್.ಐ.ಆರ್. ಪ್ರತಿಯಲ್ಲಿ ನಿ.ಪಿ.24ರ ದಾಖಲೆಯಲ್ಲಿ 'ಗಾಳಿಗೆ ಬಿದ್ದ ಮರಗಳು' ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ತಮ್ಮ ತನಿಖಾ ಅವಧಿಯಲ್ಲಿ ಸದರಿ ದಾಖಲೆಗಳನ್ನು ಸ್ವೀಕರಿಸಿರಲಿಲ್ಲ ಎಂದು ನುಡಿಯುತ್ತಾರೆ. ಅರಣ್ಯ ಇಲಾಖೆಯವರು ಮಾಡಿದ ತನಿಖಾ ವರದಿಯನ್ನು ನನ್ನ ತನಿಖಾ ಅವಧಿಯ ಕಾಲದಲ್ಲಿ ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿರಲಿಲ್ಲ. ಅದೇ ರೀತಿ ನಾನು ಭಾತ್ಮಿ ಬಂದ ಸ್ಥಳದ ತನಿಖೆ ಜರುಗಿಸಿಲ್ಲ ಎಂದರೆ ಸರಿ.

8) ಫಿರ್ಯಾದಿಯು ಅಂದಾಜು 2500 ಮರಗಳನ್ನು ಬೆಳೆದಿದ್ದರು ಎಂಬುದು ಫಿರ್ಯಾದ್ ನಲ್ಲಿ ನಮೂದಿಸಲಾಗಿದೆ. ಸದರಿ ಮರಗಳನ್ನು ಬೆಳೆಯುವುದಕ್ಕೆ ಸರಕಾರದಿಂದ ಪರವಾನಗಿ ಪಡೆಯಲಾಗಿದೆಯೇ ಎಂದರೆ ಸಾಕ್ಷಿಯು ಫಿರ್ಯಾದಿಯು ಪರವಾನಗಿ ಪಡೆದಿದ್ದರ ಬಗ್ಗೆ ತನ್ನ ಫಿರ್ಯಾದಿಯಲ್ಲಿ ನಮೂದಿಸಿದ್ದಾನೆ ಎಂದು ನುಡಿಯುತ್ತಾರೆ. ಸದರಿ ಪರವಾನಗಿ ಪತ್ರಗಳನ್ನು ನನ್ನ ತನಿಖಾ ಅವಧಿಯಲ್ಲಿ ಫಿರ್ಯಾದಿಯ ಕಡೆಯಿಂದ ಪಡೆದು ಕಡತದಲ್ಲಿ ಅಳವಡಿಸಿಲ್ಲ. ಸರಕಾರದಿಂದ ಪರವಾನಗಿ ಪಡೆದು ಶ್ರೀಗಂಧದ ಗಿಡಗಳನ್ನು ಬೆಳೆದರೆ ಆರ್.ಟಿ.ಸಿ.ಯಲ್ಲಿ ಸದರಿ ಮರಗಳ ಬಗ್ಗೆ ನಮೂದಾಗುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. ಸದರಿ ಆರ್.ಟಿ.ಸಿ.ಗಳನ್ನು ಪರಿಶೀಲನೆ ಮಾಡಿ ಅದರಲ್ಲಿ ಶ್ರೀಗಂಧದ ಮರಗಳ ಇರುವಿಕೆಯ ಬಗ್ಗೆ ಪರಿಶೀಲಿಸಿದ್ದೀರಾ ಎಂಬ ಪ್ರಶ್ನೆಗೆ

ಸಾಕ್ಷಿಯು ನಾನು ಪರಿಶೀಲಿಸಿದ್ದೇನೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರೆದು, ಮರಗಳ ಸಂಖ್ಯೆ ಎಂದು ನಮೂದಾಗಿದೆ ಎಂದು ನುಡಿದಿರುತ್ತಾರೆ.

9) ನಮ್ಮ ತನಿಖೆಯಲ್ಲಿ ಶ್ರೀಗಂಧದ ಗಿಡಗಳು ಸದರಿ ಆರ್.ಟಿ.ಸಿ.ಯಲ್ಲಿ ಬೆಳೆಯದೇ ಇರುವ ಬಗ್ಗೆ ಕಂಡುಬಂದಿತು ಎಂದರೆ ಸರಿಯಲ್ಲ. ಮೊದಲನೆಯ ಎಫ್.ಐ.ಆರ್.ಗೂ ಮತ್ತು ಎರಡನೇ ಎಫ್.ಐ.ಆರ್.ಗೂ ನಾಲ್ಕು ತಿಂಗಳ ಅಂತರವಿದೆ. ಅರಣ್ಯ ಅಧಿಕಾರಿಗಳು ಯಾವ ಕಾರಣಕ್ಕೆ ತನಿಖೆ ಮುಂದುವರೆಸಲಿಲ್ಲ ಎನ್ನುವ ಬಗ್ಗೆ ನಾನು ನನ್ನ ತನಿಖಾ ಅವಧಿಯಲ್ಲಿ ಪರಿಶೀಲಿಸಲಿಲ್ಲ. ನನ್ನ ತನಿಖಾ ಅವಧಿಯಲ್ಲಿ ಶ್ರೀಗಂಧದ ಗಿಡಗಳನ್ನು ಎಲ್ಲಿ ಬೆಳೆದಿದ್ದಾರೆ, ಯಾರು ಬೆಳೆದಿದ್ದಾರೆ, ಅವುಗಳನ್ನು ಕಟಾವು ಮಾಡಿ ಯಾರಿಗೆ ಮಾರಾಟ ಮಾಡಿದ್ದಾರೆ ಎಂಬ ಮಾಹಿತಿ ಇರದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತನಿಖಾ ಅವಧಿಯಲ್ಲಿ ಅರಣ್ಯ ಅಧಿಕಾರಿಗಳ ಎಫ್.ಐ.ಆರ್. ನಲ್ಲಿ ಗಾಳಿಗೆ ಬಿದ್ದ ಮರಗಳು ಎಂದು ನಮೂದಾಗಿದ್ದರೂ ಸಹ ಫಿರ್ಯಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆಯದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ದಾಖಲಾತಿಗಳನ್ನು

ಸಂಗ್ರಹಿಸದೇ ಇದ್ದರೂ ಫಿರ್ಯಾದಿಗೆ ಅನುಕೂಲವಾಗಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಉಳಿದ ಆರೋಪಿತರ ಪರವಾಗಿಃ</u>**

ಉಳಿದ ಆರೋಪಿತರ ಪರ ವಕೀಲರು ಶ್ರೀ ಪಿ.ಎಂ.ಬಿ., ವಕೀಲರು ಮಾಡಿದ ಪಾಟಿ ಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

4 ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.